ಅ) *ಶಿವಮೊಗ್ಗ ತಾಲ್ಲೂಕು ಆಯನೂರಿನ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಲಾಗಿದೆಯೇ? ಹಾಗಿದ್ದಲ್ಲಿ ಯಾವಾಗ?*

ಆ) *ಕಟ್ಟಡ ಕಾಮಗಾರಿಕೆ ನಿಗಧಿಪಡಿಸಿರುವ ಮತ್ತು ಈವರಗೆ ಬಿಡುಗಡೆ ಮಾಡಲಾದ ಹಣವೆಷ್ಟು? ಯಾವಾಗ ಕಾಮಗಾರಿ ಪ್ರಾರಂಭಿಸಲಾಗುವುದು?*

ಡಾ|| ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಏರಿಸಿದೆ. ದಿನಾಂಕ 19-11-92ರಲ್ಲಿ.

ಆ) ನಿಗಧಿಪಡಿಸಿಲ್ಲ. ಮುಖ್ಯ ಇಂಜಿನಿಯರರವರಿಂದ ತಾಂತ್ರಿಕ ಮಂಜೂರಾತಿ ಪಡೆದ ನಂತರ ಹಾಗೂ ಜಿಲ್ಲಾ ಪಂಚಾಯತ್ ಅಡಿಯಲ್ಲಿ ಅನುದಾನ ನಿಗಧಿಪಡಿಸಿಕೊಂಡು ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ಅರಣ್ಯ ಕುರಿತಂತೆ ಸುಪ್ರೀಂ ಕೋರ್ಟ್ ನೀಡಿದ ತೀರ್ಪಿನಿಂದ ಉಂಟಾದ ತೊಂದರೆಗಳು.

746 - ಶ್ರೀ ಆಯನೂರು ಮಂಜುನಾಥ್ (ಹೊಸನಗರ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) *ಇತ್ತೀಚೆಗೆ ಸುಪ್ರೀಂ ಕೋರ್ಟ್(19-1-1997) ಅರಣ್ಯ ಇಲಾಖೆಗೆ ಸಂಬಂಧಿಸಿದಂತೆ ನೀಡಿದ ತೀರ್ಪು ಸರ್ಕಾರದ ಗಮನಕ್ಕೆ ಬಂದಿದೆಯೆ?*

2) *ಬಂದಿದ್ದಲ್ಲಿ ಅದರ ಸಾಧಕ ಭಾದಕಗಳನ್ನು ಸರ್ಕಾರ ಗಮನಿಸಿದೆಯೆ?*

3) *ಈ ತೀರ್ಪಿನಂದಾಗಿ ಲಕ್ಷಾಂತರ ಕಾರ್ಮಿಕರು ಬೀದಿ ಪಾಲಾಗುವುದಲ್ಲದೆ ನೂರಾರು ಕೈಗಾರಿಕೆಗಳು ಮುಚ್ಚುವುದಿಲ್ಲವೆ, ಇದರ ಪರಿಹಾರಕ್ಕಾಗಿ ಸರ್ಕಾರ ಕೈಗೊಂಡ ಕ್ರಮವೇನು?*

4) *ಈ ತೀರ್ಪಿನಿಂದ ಸಾರ್ವಜನಿಕರಿಗೆ ಉಂಟಾಗುವ ತೊಂದರೆಗಳನ್ನು ನಿವಾರಿಸಲು ಸರ್ಕಾರ ತೆಗೆದುಕೊಳ್ಳುವ ಕ್ರಮಗಳು ಯಾವ ಯಾವುವು?*

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಸಚಿವರು) :

1) ಹೌದು

2) ಗಮನಿಸಿದೆ.

3) ಈ ತೀರ್ಪಿನಿಂದಾಗಿ ಮುಖ್ಯವಾಗಿ ಬಿದಿರನ್ನು ಅವಲಂಬಿಸಿದ ಕಸುಬುದಾರರಾದ ಹಲವಾರು ಅಗರಬತ್ತಿ ಕಾರ್ಮಿಕರಿಗೆ, ಮೇದಾರರಿಗೆ ಹಾಗೂ ಗಣಿಗಾರಿಕೆಯಲ್ಲಿ ತೊಡಗಿರುವ ಕಾರ್ಮಿಕರಿಗೆ ತೊಂದರೆಯಾಗಿತ್ತು. ಅಗರಬತ್ತಿ ಕಾರ್ಮಿಕರಿಗೆ ಹಾಗೂ ಮೇದಾರರಿಗೆ ಆಗಿರುವ ತೊಂದರೆ ನಿವಾರಣೆ ಸಲುವಾಗಿ ರಾಜ್ಯ ಸರ್ಕಾರ ಇವರುಗಳ ಮಟ್ಟಿಗೆ ಬಿದಿರುಗಳ ಉಪಯೋಗಕ್ಕೆ ತಡೆಯನ್ನು ಸಡಿಲಿಸಲು ಸರ್ವೋಚ್ಚ ನ್ಯಾಯಾಲಯವನ್ನು ಮನವಿ ಮಾಡಿಕೊಂಡಿತ್ತು ಮತ್ತು ನ್ಯಾಯಾಲಯ

ತನ್ನ ದಿನಾಂಕ 4-3-1997ರ ತೀರ್ಪಿನಲ್ಲಿ ಇವರುಗಳ ಮಟ್ಟಿಗೆ ತಡೆಯನ್ನು ಸಡಿಲಿಸಿದೆ. ಗಣಿಗಾರಿಕೆ ಬಗ್ಗೆ ಸರ್ವೋಚ್ಚ ನ್ಯಾಯಾಲಯವು ಅರಣ್ಯ ಸಂರಕ್ಷಣಾ ಕಾಯ್ದೆ ಸೆಕ್ಷನ್(2)ರ ಪ್ರಕಾರ ಕೇಂದ್ರದ ಅನುಮತಿ ತೆಗೆದುಕೊಳ್ಳಲು ಪ್ರಸ್ತಾವನೆ ಕಳುಹಿಸಲು 15 ದಿನಗಳ ಕಾಲಾವಕಾಶ ನೀಡಿರುತ್ತಾರೆ.ಅದರಂತೆ ಬಾಕಿ ಇರುವ ಎಲ್ಲಾ ಪರಿಪೂರ್ಣ ಪ್ರಸ್ತಾವನೆಗಳನ್ನು ಕಳುಹಿಸಲು ಕ್ರಮ ತೆಗೆದುಕೊಳ್ಳಲಾಗಿದೆ.

4) ಉಪಪ್ರಶ್ನೆ ಸಂಖ್ಯೆ 3ರ ಉತ್ತರದಲ್ಲಿ ವಿವರಿಸಿರುವ ತೀರ್ಪಿನಿಂದ ಕಾನೂನು ರೀತ್ಯಾ ಚಟುವಟಿಕೆ ನಡೆಸುತ್ತಿರುವ ಯಾವುದೇ ಸಾರ್ವಜನಿಕರಿಗೆ ತೊಂದರೆಯಾಗಿಲ್ಲ.

ಹೊಸನಗರ ಪ್ರಥಮ ದರ್ಜೆ ಕಾಲೇಜಿನ ಕಟ್ಟಡ ನಿರ್ಮಾಣ

747 - ಶ್ರೀ ಆಯನೂರು ಮಂಜುನಾಥ (ಹೊಸನಗರ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹೊಸನಗರದಲ್ಲಿನ ಪ್ರಥಮ ದರ್ಜೆ ಕಾಲೇಜು ಕಟ್ಟಡ ನಿರ್ಮಾಣ ಮಾಡಲು ಯಾವಾಗ ಮಂಜೂರಾತಿ ನೀಡಲಾಯಿತು. ಅದಕ್ಕೆ ನಿಗಧಿಪಡಿಸಿದ ಹಣ ಎಷ್ಟು ?

ಆ) ಕಾಲೇಜಿನ ಕಟ್ಟಡದ ಕಾಮಗಾರಿ ಯಾವ ಹಂತದಲ್ಲಿದೆ. ಇದಕ್ಕಾಗಿ ಎಷ್ಟು ಹಣ ಖರ್ಚು ಮಾಡಲಾಗಿದೆ ಮತ್ತು ಕಾಲೇಜಿನ ಕಟ್ಟಡ ಯಾವಾಗ ಪೂರ್ಣಗೊಳಿಸಿ ವಿದ್ಯಾರ್ಥಿಗಳ ಉಪಯೋಗಕ್ಕೆ ನೀಡಲಾಗುವುದು ?

ಶ್ರೀ ಬಿ. ಸೋಮಶೇಖರ್ (ಉನ್ನತ ಶಿಕ್ಷಣ ಸಚಿವರು) :

ಅ) ಹೊಸನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕಟ್ಟಡ ನಿರ್ಮಾಣಕ್ಕಾಗಿ ರೂ.46.25 ಲಕ್ಷಗಳ ಅಂದಾಜು ನಿಗಧಿಪಡಿಸಿ, 1990ರಲ್ಲಿ ಮಂಜೂರಾತಿ ನೀಡಲಾಗಿದೆ.

ಆ) ಕಾಲೇಜಿನ ಕಟ್ಟಡದ ನಿರ್ಮಾಣಕ್ಕಾಗಿ ರೂ.44.51 ಲಕ್ಷಗಳು ಖರ್ಚಾಗಿದ್ದು, ಉಳಿದ ಕಾಮಗಾರಿಗಾಗಿ ಟೆಂಡರ್ ಕರೆಯಲಾಗಿದೆ.

ಹೊಸನಗರ ಪ್ರಥಮ ದರ್ಜೆ ಕಾಲೇಜಿನ ಕಟ್ಟಡ ಕಾಮಗಾರಿ

748 - ಶ್ರೀ ಆಯನೂರು ಮಂಜುನಾಥ್ (ಹೊಸನಗರ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕೆಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊಸನಗರ ಪ್ರಥಮ ದರ್ಜೆ ಕಾಲೇಜಿನ ಕಟ್ಟಡ ಕಾಮಗಾರಿ ಸ್ಥಗಿತಗೊಂಡಿರಲು ಕಾರಣಗಳೇನು ? ಈ ಕಾಮಗಾರಿಯಲ್ಲಿ ಭ್ರಷ್ಟಾಚಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಬಂದಿದ್ದಲ್ಲಿ ಸರ್ಕಾರ ಸೂಕ್ತ ತನಿಖೆ ನಡೆಸುವುದೇ ?